# ‘ಬಿಗ್ ಬಿ’ ಭೇಟಿಯ ಆ ಕ್ಷಣ!

**ಬಾಲಿವುಡ್ ಬಿಗ್‌ಬಿ ಅವರನ್ನು ಅತ್ಯಂತ ಸನಿಹದಿಂದ ನೋಡಬೇಕು, ಅವರಿಂದ ಆಟೊಗ್ರಾಫ್ ಪಡೆಯಬೇಕು ಎಂಬ ನನ್ನ 38 ವರ್ಷಗಳ ಅವಿರತ ತಪಸ್ಸು ಕೊನೆಗೂ ಫಲಿಸಿತು. ಇದು ನನ್ನ ಸೌಭಾಗ್ಯವೆಂದೇ ಹೇಳಬೇಕು.**

**■ ಚಿತ್ರ-ಬರಹ: ಎಂ.ಎನ್.ಚೇತನ, ಬೆಂಗಳೂರು**



ಸಾಮಾನ್ಯವಾಗಿ ಸಿನಿಮಾ ನಟರು ಒಂದಲ್ಲ ಒಂದು ಕಾರಣಕ್ಕೆ ಮನಸ್ಸಿಗೆ ತುಂಬ ಇಷ್ಟವಾಗುತ್ತಾರೆ, ಹಿಡಿಸುತ್ತಾರೆ, ನಮಗರಿವಿಲ್ಲದಂತೆಯೇ ಅವರ ಉತ್ಕಟ ಅಭಿಮಾನಿಗಳಾಗುತ್ತೇವೆ, ಕೊನೆಗೆ ಅವರನ್ನೇ ಆರಾಧಿಸಲೂ ಆರಂಭಿಸುತ್ತೇವೆ. ಬಾಲಿವುಡ್ ಬಿಗ್‌ಬಿ ಎಂದರೆ ನನಗೆ ಎಲ್ಲಿಲ್ಲದ ಅಚ್ಚುಮೆಚ್ಚು.

ಚಿಕ್ಕಂದಿನಿಂದಲೂ ನಾನು ಸೂಪರ್‌ಸ್ಟಾರ್ ಅಮಿತಾಭ್ ಬಚ್ಚನ್ ಅವರ ಅಭಿಮಾನಿ. ನಾವೆಲ್ಲರೂ ಅವರ ಸಿನಿಮಾವನ್ನು ಮೊದಲನೇ ದಿನವೇ ನೋಡುತ್ತಿದ್ದೆವು. ಅವರ ಚಿತ್ರ ‘ಮಜಬೂರ್’ ನೋಡಿದಾಗಿನಿಂದ ಅವರು ನನ್ನ ಮನಸ್ಸಿನಲ್ಲಿ ಅಣ್ಣನಾಗಿ ಬೇರೂರಿಬಿಟ್ಟರು. ‘ಕೂಲಿ’ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಅವರು ಬದುಕುವುದೇ ಕಷ್ಟ ಎಂದರು. ನಾನಾಗ ನೂರು ಪೋಸ್ಟ್ ಕಾರ್ಡ್ ತಂದು ಅವರು ಬೇಗ ಹುಷಾರಾಗಲಿ ಅಂತ ಬರೆದು ದೇವರಲ್ಲಿ ಪ್ರಾರ್ಥಿಸಿ ದಿನಾ ಒಂದು ಕಾರ್ಡ್ ಪೋಸ್ಟ್ ಮಾಡುತ್ತಿದ್ದೆ. ಅವರಿಗೆ ಪ್ರತಿ ವರ್ಷ ಹುಟ್ಟಹಬ್ಬಕ್ಕೆ ಗ್ರೀಟಿಂಗ್ ಕಾರ್ಡ್ ಪೋಸ್ಟ್ ಮಾಡುತ್ತಿದ್ದೆ. ರಾಖಿ ಕಳಿಸುತ್ತಿದ್ದೆ. ಇವತ್ತಿಗೂ ರಾಖಿ ಕಳಿಸುತ್ತೇನೆ.

2013ರಲ್ಲಿ ನಮ್ಮಕ್ಕನ ಜೊತೆ ನಮ್ಮ ಕುಟುಂಬ, ನಮ್ಮ ಅಣ್ಣನ ಕುಟುಂಬ ಮುಂಬೈಗೆ ಹೋದೆವು. ನಮ್ಮ ಅತ್ತಿಗೆಯವರ ಕಡೆಯಿಂದ ಬಿಗ್ ಬಿ ಅವರ ಕಾರಿನ ಡ್ರೈವರ್ ರಾಜು ಅವರ ಪರಿಚಯವಾಯಿತು. ಆಗಲೇ ಬಿಗ್ ಬಿ ಅವರನ್ನು ನೋಡುವ ಅವಕಾಶ, ಸೌಭಾಗ್ಯವೂ ಸಿಕ್ಕಿತು. ಆದರೆ ಭೇಟಿ ಮಾಡಲು ಸಾಧ್ಯವಾಗಲಿಲ್ಲ. ನಾನು ಆಗ ರಾಜು ಅವರಿಗೆ ಫೋನ್ ಮಾಡಿ ‘ಬಿಗ್ ಬಿ ಅವರನ್ನು ಭೇಟಿ ಮಾಡಲು ಅವಕಾಶ ಮಾಡಿಕೊಡಿ’ ಅಂತ ಕೇಳುತ್ತಿದ್ದೆ. ಕಡೆಗೂ ನನ್ನ ಕೂಗು ಅವರಿಗೆ ಕೇಳಿಸಿತು. ನನ್ನ ಹಲವು ದಿನಗಳ ಆಸೆ ಫಲಿಸಿತು. ಅದು ನನ್ನ ಪುಣ್ಯ.

2017 ಆಗಸ್ಟ್ 19ನೇ ತಾರೀಕು ನನ್ನ ಜೀವನದಲ್ಲಿ ಅತ್ಯಂತ ಸ್ಮರಣೀಯವಾದ ದಿನ. ಅವತ್ತು ನಾನು ನಮ್ಮ ಯಜಮಾನರು ಅಮಿತಾಬ್ ಅವರ ಕೌನ್ ಬನೇಗಾ ಕರೋಡ್‌ಪತಿ ಶೋ ವೀಕ್ಷಿಸಲು ಹೋಗಿದ್ದೆವು. ನನಗೆ ಅವರನ್ನು ಕಣ್ತುಂಬ ನೋಡುವ ಅವಕಾಶ ಸಿಕ್ಕಿತು. ನಂತರ ಜುಹೂನಲ್ಲಿರುವ ಅವರ ಆಫೀಸ್ ‘ಜನಕ್’ ಹತ್ತಿರ ಬಂದು ಅಮಿತಾಬ್ ಬಚ್ಚನ್ ಅವರನ್ನು ಭೇಟಿ ಮಾಡಿದೆವು. ಅವರು ಜಿಮ್ ಡ್ರೆಸ್‌ನಲ್ಲಿದ್ದರು. ನನಗೆ ಒಂದು ಕಡೆ ಭಯ, ಇನ್ನೊಂದೆಡೆ ಎಲ್ಲಿಲ್ಲದ ಪುಳಕ. ಜೊತೆಗೆ ಖುಷಿಯಿಂದಲೋ, ಭಯದಿಂದಲೋ ಕೈ ಕಾಲು ನಡುಗುತ್ತಿತ್ತು. ಏನು ಮಾತನಾಡಬೇಕೋ ಗೊತ್ತಾಗಲಿಲ್ಲ. ಅವರಿಗೆ ನಮಸ್ಕಾರ ಮಾಡಿ, ಆಟೋಗ್ರಾಫ್ ತೆಗೆದುಕೊಂಡು ಅವರಿಗೆ ರಾಖಿ ಕೊಟ್ಟು ಅವರ ಜೊತೆ ಫೋಟೊ ತೆಗೆಸಿಕೊಂಡೆವು.

38 ವರ್ಷದ ತನ್ನ ಅವಿರತ ಪ್ರಯತ್ನ ಹಾಗೂ ತಪಸ್ಸಿಗೆ ನನ್ನ ಮುಂದೆ ನನ್ನ ದೇವರು ಪತ್ರಕ್ಷವಾಗಿದ್ದರು. ಅವರ ಜೊತೆ ಕಳೆದ ಕ್ಷಣ ನನ್ನ ಜೀವನದಲ್ಲಿ ಮರೆಯಲಾಗದ ಕ್ಷಣ. 76 ವಯಸ್ಸಿನಲ್ಲೂ ಯುವಕರನ್ನು ನಾಚಿಸುವಂತೆ ಕೆಲಸ ಮಾಡುವ ಅವರನ್ನು ದೇವರು ಚೆನ್ನಾಗಿ ಇಟ್ಟಿರಲಿ. ನನಗೆ ಸಹಾಯ ಮಾಡಿದ ಎಲ್ಲರಿಗೂ ಧನ್ಯವಾದಗಳನ್ನು ಹೇಳದೇ ಹೋದರೆ ಈ ಅಪರೂಪದ ಕ್ಷಣಗಳನ್ನು ನೆನೆಸಿಕೊಂಡದ್ದು ಅಪೂರ್ಣವಾದೀತು. ■